ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 87/2016
(ಫ್ರಾಸಾ-3 ಚಾಸಾ-5)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 05.04.2023

| | | |
|---|---|---|
| ಸಾಕ್ಷಿದಾರರ ಹೆಸರು | - | ಜಗದೀಶ್ |
| ತಂದೆಯ ಹೆಸರು | - | ವೆಂಕಟರಾಮಯ್ಯ |
| ವಯಸ್ಸು | - | 35 ವರ್ಷ, |
| ಉದ್ಯೋಗ | - | ಖಾಸಗಿ ಕೆಲಸ |
| ವಾಸ | - | ಚಿಕ್ಕಸಂದ್ರ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-1 ಮುನಿವೆಂಕಟಪ್ಪ ಇವರ ಪರಿಚಯ ಇಲ್ಲ. ನ್ಯಾಯಾಲಯದ ಮುಂದೆ ಇರುವ 1 ಮತ್ತು 2 ನೇ ಆರೋಪಿತರ ಪರಿಚಯ ಇಲ್ಲ. ಈಗ ಹೆಸರು ಓದಿ ಹೇಳಿದ ಗೈರು ಹಾಜರಿರುವ 3 ಮತ್ತು 4 ನೇ ಆರೋಪಿತರ ಪರಿಚಯ ಇಲ್ಲ. ಚಾಸಾ-1 ಮತ್ತು ಆರೋಪಿತರ ಮಧ್ಯೆ ಗಲಾಟೆ ಆಗಿದ್ದನ್ನು ನಾನು ನೋಡಿಲ್ಲ. ಪೋಲಿಸರಿಗೆ ನಾನು ಹೇಳಿಕೆ ನೀಡಿಲ್ಲ. ಚಾಸಾ-4 ಮತ್ತು 6 ಇವರ ಪರಿಚಯ ಇಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎಸ್ ಪಿಪಿ ರವರು ವಿನಂತಿಸಿದ್ದರಿಂದ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

2. ನಮ್ಮ ಊರಿನ ಚಾಸಾ-1 ಇವರ ಪರಿಚಯ ನನಗೆ ಇದೆ ಎಂದರೆ ಸರಿಯಲ್ಲ. ದಿಃ31.12.2015 ರಂದು ಬೆಳಗ್ಗೆ 10 ಘಂಟೆಗೆ ನಾನು, ಚಾಸಾ-6 ಸೇರಿಕೊಂಡು ಚಾಸಾ-4 ಇವರನ್ನು ನೋಡುವ ಸಲುವಾಗಿ ಚಾಸಾ-1 ಇವರ ಜಮೀನಿನ ಹತ್ತಿರ ಹೋಗಿದ್ದೆವು ಎಂದರೆ ಸರಿಯಲ್ಲ. ಆಗ ಚಾಸಾ-1 ಮತ್ತು ಆತನ ಮಕ್ಕಳು ಹುಣಸೇ ಮರದಿಂದ ಹುಣಸೇ ಹಣ್ಣನ್ನು ಕೀಳುತ್ತಿದ್ದಾಗ ಆರೋಪಿತರು ಅವರೊಂದಿಗೆ ಗಲಾಟೆ ಮಾಡಿ ಮಾದಿಗ ನನ್ನ ಮಕ್ಕಳು ಎಂದು ಜಾತಿ ನಿಂದನೆ ಮಾಡಿ ಪೆಟ್ರೋಲ್ ಹಾಕಿ ಬೆಂಕಿ

ಹಚ್ಚಿ ಸಾಯಿಸುವುದಾಗಿ ಜೀವ ಬೆದರಿಕೆ ಹಾಕಿ ಅಲ್ಲೇ ಇದ್ದ ಡಾಃ ಅಂಬೇಡ್ಕರ್ ಇವರ ಭಾವಚಿತ್ರದ ಬೋರ್ಡ್‌ನ್ನು ಕಿತ್ತು ಹಾಕಿ ಗಲಾಟೆ ಮಾಡಿದರು ಎಂದರೆ ಸರಿಯಲ್ಲ. 1 ನೇ ಆರೋಪಿ ಚಾಸಾ-1 ಈತನಿಗೆ ಚಪ್ಪಲಿಯಿಂದ ಹೊಡೆದ ಎಂದರೆ ಸರಿಯಲ್ಲ. ನಾವು ಮೂರು ಜನ ಗಲಾಟೆ ಬಿಡಿಸಿದೆವು ಎಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ ನಿಪಿ-5 ರಂತೆ ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸುತ್ತಾರೆ.

(ಸಾಕ್ಷಿ ಹೇಳಿದಂತೆ ಹೇಳಿಕೆಯನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು